ಅ) ಹೌದು.

ಆ) ಈ ಶಾಲೆಯನ್ನು ಸರ್ಕಾರವು ವಹಿಸಿಕೊಳ್ಳುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಇ) ಸರ್ಕಾರದ ಮುಂದೆ ಈ ರೀತಿ ಯಾವುದೇ ಪ್ರಸ್ತಾವನೆ ಇಲ್ಲ.

ಈ) ಉದ್ಭವಿಸುವುದಿಲ್ಲ.

SRI B. I. PATIL :- I will ask as to what is the reaction of the Government in the interest of the school students, staff and the public ? What is the difficulty for the Government in taking over the said school since in other Cantonment parts, Government has taken over such schools in similar situations ?

SRI . PUTTASWAMY GOWDA, (Health and Family Welfare Minister, on behalf of the Minister for Education): - It is a fact that the Government has discontinued the grant-in-aid since 1987 since the institution has not fulfilled grant-in-aid conditions. Now, those people have come forward to fulfil the rules of grant-in-aid. Government is thinking and it is yet to consider that case.

SRI B.I. PATIL:- In 1956, the Government has given the grant-in-aid. Therefore, I request the Government to kindly initiate proposals to take over the said school.

SRI G. PUTTASWAMY GOWDA :- It is under consideration.

ಹೆಚ್ಚುವರಿ ಅನುದಾನ ಕೋರಿಕೆ

140 (615). ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಎ) ಬಿಜಾಪುರ ಸೈನಿಕ ಶಾಲೆಯು ಹಣಕಾಸಿನ ಸಮಸ್ಯೆಯನ್ನು ಎದುರಿಸಲಾಗುತ್ತಿದೆಯೇ ?

ಬಿ) ಹಣಕಾಸಿನ ಮುಗ್ಗಟ್ಟನ್ನು ನಿವಾರಿಸಲು ಹೆಚ್ಚುವರಿ ಅನುದಾನ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ?

ಸಿ) ಸರ್ಕಾರವು ಅದನ್ನು ಅನುಮೋದಿಸಲಾಗಿದೆಯೇ ? ಅಥವಾ ಇಲ್ಲವೇ ?

ಡಿ) 1992-93ನೇ ಸಾಲಿಗೆ ವ್ಯವಸ್ಥಿತ ಆಯವ್ಯಯಕ್ಕಿಂತ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರದ ಯೋಜನೆ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಎ) ಹೌದು.

ಬಿ) ಹೌದು.

ಸಿ ಮತ್ತು ಡಿ) ಪರಿಶೀಲನೆಯಲ್ಲಿದೆ.

ಶ್ರೀ ಮನೋಹರ ಐನಾಪುರ :- ಮಾನ್ಯ ಅಧ್ಯಕ್ಷೀಣೆಯವರೇ, ನಾನು ಕೇಳಿದ ಪ್ರಶ್ನೆ ಏನೆಂದರೆ for my question(a), whether sainik School, Bijapur, is facing a lot of financial problems, the answer is "Yes". For my question(b), whether there is a proposeal for giving additional grant to cope-up the crisis, the answer given is "Yes. for my question(c). If so, whether the Government has any plans to allot additional funds for the year 1992-93, other than regular budget, the answer given is "under consideration".

ಈ ಸೈನಿಕ ಶಾಲೆ ಬಿಜಾಪುರದಲ್ಲಿ 1964ನೇ ಇಸವಿಯಲ್ಲಿ ಪ್ರಾರಂಭವಾಯಿತು. ಈಗ ಸುಮಾರು 26-27 ವರ್ಷಗಳಿಂದ ನಡೆಯುತ್ತಿದೆ. ಈಗ ೪-೫ ವರ್ಷಗಳ ಹಿಂದೆ ವಿದ್ಯಾರ್ಥಿಗಳ ವೇತನವನ್ನು ಸುಮಾರು 7500ಕ್ಕೆ ನಿಗದಿಪಡಿಸಲಾಗಿತ್ತು. ಇತ್ತೀಚೆಗೆ ಬೆಲೆ ಏರಿಕೆಯ ಕಾರಣದಿಂದಾಗಿ ಸೈನಿಕ ಶಾಲೆಯಲ್ಲಿರತಕ್ಕಂಥ ಸುಮಾರು ಆರುನೂರು ವಿದ್ಯಾರ್ಥಿಗಳಿಗೆ ಸರಿಯಾಗಿ ಊಟ ಕೊಡುವುದಕ್ಕಾಗುತ್ತಿಲ್ಲ. ಸರಿಯಾಗಿ ಬಟ್ಟೆಗಳನ್ನು ಕೊಡುವುದಕ್ಕಾಗುತ್ತಿಲ್ಲ. ಸರಿಯಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿಲ್ಲ. ಅದಕ್ಕೋಸ್ಕರ ಶಾಲೆಯನ್ನು ಏಪ್ರಿಲ್ ತಿಂಗಳ ಕೊನೆಯಲ್ಲಿ ಮುಚ್ಚುವ ಬಗಲಾಗಿ ಫೆಬ್ರುವರಿ ತಿಂಗಳಲ್ಲಿ ಹೋದ ವರ್ಷ ಮುಚ್ಚಲಾಯಿತು. ಆವಾಗ ನಾನು ಫೈನಾನ್ಸ್ ಸೆಕ್ರೆಟರಿಯನ್ನು ಮತ್ತು ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಂಡಾಗ 8 ಲಕ್ಷ ರೂಪಾಯಿ ಅನುದಾನ ಸೈನಿಕಶಾಲೆಗೆ ಬಿಡುಗಡೆ ಮಾಡಿದರು. ಈಗ ಮತ್ತೆ ಶಾಲೆಯನ್ನು ಫೆಬ್ರುವರಿ ತಿಂಗಳಲ್ಲಿ ಮುಚ್ಚಲಾಗಿದೆ. ಅದಕ್ಕೋಸ್ಕರ ಮಾನ್ಯ ಶಿಕ್ಷಣ ಸಚಿವರು ಈ ಸೈನಿಕ ಶಾಲೆಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತಾರೆಯೇ ಹೇಗೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಮಾನ್ಯ ಅಧ್ಯಕ್ಷರೇ ಸೈನಿಕ ಶಿಕ್ಷಣ ಶಾಲೆಗೆ ಹೆಚ್ಚುವರಿ ಹಣವನ್ನು ಬೇಡಿರತಕ್ಕಂಥಾದ್ದು ನಿಜ ಇದರ ಬಗ್ಗೆ ಸರ್ಕಾರದಲ್ಲಿ ಆರ್ಥಿಕ ನಿರ್ಬಂಧ ಇರುವುದರಿಂದ ಕೊಡಲಿಕ್ಕೆ ಸಾಧ್ಯವಾಗಿಲ್ಲ, ಆರ್ಥಿಕ ಇಲಾಖೆಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿ ಸಡಿಲಮಾಡಿ 35 ಲಕ್ಷ ರೂಪಾಯಿಗಳನ್ನು ಈ ವರ್ಷಕ್ಕೆ ನಿಗದಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದೆ. ಆರ್ಥಿಕ ಇಲಾಖೆಯವರು 1-2 ದಿವಸಗಳಲ್ಲಿಯೇ ಮಂಜೂರಾತಿ ಕೊಡುತ್ತಾರೆನ್ನತಕ್ಕಂಥ ನಿರೀಕ್ಷೆ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಇದು ಬಂದ ತಕ್ಷಣ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. 1992-93ರಿಂದ ಈ ರೀತಿ ಕೊರತೆಯಾಗುವುದಿಲ್ಲ. ಕೇಂದ್ರ ಸರ್ಕಾರ 11 ಸಾವಿರಕ್ಕೆ ಈಗಾಗಲೇ ಇನ್ನು $7\frac{1}{2}$ ಸಾವಿರ ಹೆಚ್ಚಿಸತಕ್ಕಂಥ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಈ ಹಿನ್ನೆಲೆಯಿಂದ ಮುಂದಿನ ವರ್ಷಕ್ಕೆ ಈ ಒಂದು ಹಣದ ಕೊರತೆಯಾಗಲಿ ಮತ್ತು ಈ ಶಿಕ್ಷಣ ಸಂಸ್ಥೆ ಅತ್ಯುತ್ತಮವಾಗಿ ನಡೆಯುವುದಕ್ಕೆ ಯಾವ ತೊಂದರೆಯಾಗುವುದಿಲ್ಲ ಎನ್ನತಕ್ಕ ಸ್ಪಷ್ಟವಾದ ಭರವಸೆಯನ್ನು ಈ ಸಮಯದಲ್ಲಿ ಕೊಡ ಬಯಸುತ್ತೇನೆ.

ಇದಲ್ಲದೆ ಎಕ್ವಿಪ್ ಮೆಂಟ್ ಗ್ರಾಂಟ್ಸ್, ಆಗಿ 1 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅದನ್ನು ಶೀಘ್ರದಲ್ಲೇ ಒದಗಿಸಲಾಗುತ್ತದೆ.

ಶ್ರೀ ಮನೋಹರ್ ಐನಾಪುರ್:- ಹೈದರಬಾದ್ ಕರ್ನಾಟಕ ಭಾಗದಲ್ಲಿ ಸೈನಿಕ ಶಾಲೆ ತೆರೆಯುವ

ಉಪಾಧ್ಯಕ್ಷಣೆಯವರು:- ಈ ಪ್ರಶ್ನೆಗೆ ಅದು ಬರುವುದಿಲ್ಲ.

ಶ್ರೀ ಮನೋಹರ್ ಐನಾಪುರ್:- ಮಂತ್ರಿಗಳು ಹೇಳಿದರು 35 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು. ಇದನ್ನು ರೆಗ್ಯುಲರ್ ಬಡ್ಜೆಟ್ ನಲ್ಲಿ ಸೇರಿಸುತ್ತೀರಾ ಅಥವಾ ಆಡಿಷನಲ್ ಗ್ರಾಂಟ್ ಆಗಿ ಕೊಡುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ರೆಗ್ಯುಲರ್ ಬಡ್ಜೆಟ್‌ನಲ್ಲಿ ಇರತಕ್ಕದ್ದು 31 ಲಕ್ಷ ರೂಪಾಯಿ ಮಾತ್ರ. ಆದರೆ 35 ಲಕ್ಷ ರೂಪಾಯಿ ಬೇಕೆ ಎಂದು ಹೇಳಿದ್ದಾರೆ. ಈ ಸಾರಿ ಹೆಚ್ಚುವರಿ ಬಡ್ಜೆಟ್ಟಿನಲ್ಲಿ ಕೊಡಲಾಗುತ್ತದೆ. ಮುಂದಿನ ಸಾರಿ ಈ ಕೊರತೆ ಆ ಸಂಸ್ಥೆಗೆ ಇರುವುದಿಲ್ಲ.

ಶ್ರೀ ಮನೋಹರ್ ಐನಾಪುರ್:- ಈ ಹಣ ಸಾಲುವುದಿಲ್ಲ, ಆದಕ್ಕೋಸ್ಕರ ಕೇಂದ್ರ ಸರ್ಕಾರದವರು 11 ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಈ ವರ್ಷದ ಖರ್ಚು ವೆಚ್ಚಗಳನ್ನು ಭರಿಸಲು ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ? 31 ಲಕ್ಷ ರೂಪಾಯಿಗಳನ್ನು ರೆಗ್ಯುಲರ್ ಬಡ್ಜೆಟ್ಟಿನಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಹೆಚ್ಚುವರಿ ಹಣವನ್ನು ಎಷ್ಟು ಕೊಡುತ್ತೀರಿ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ಈ ಸಂಸ್ಥೆ ಬಹಳ ಅತ್ಯುತ್ತಮವಾಗಿ ನಡೆಯುತ್ತಿದೆ. ಅದು ಇಡೀ ರಾಜ್ಯಕ್ಕೆ ಪ್ರತಿಷ್ಠಿತ ಸಂಸ್ಥೆ ಎಂಬುದು ಸರ್ಕಾರದ ಗಮನದಲ್ಲಿದೆ. ಅದನ್ನು ನಡೆಸುವುದಕ್ಕೆ ಹಣದ ಕೊರತೆ ಮಾಡುವುದಿಲ್ಲ, ಅದಕ್ಕೆ ಬೇಕಾಗತಕ್ಕ ಹಣವನ್ನು ಬಿಡುಗಡೆ ಮಾಡುತ್ತೇವೆ. ಮುಂದಿನ ವರ್ಷದಿಂದ ಕೇಂದ್ರ ಸರ್ಕಾರದವರು ಇದರ ನೆರವಿಗೆ ಬರಲಿದ್ದಾರೆ. ಈ ಸಂಸ್ಥೆಯನ್ನು ಚೆನ್ನಾಗಿ ನಡೆಸುವುದಕ್ಕೆ ಸರ್ಕಾರ ಗಮನ ಹರಿಸುತ್ತದೆ.